# ಶ್ರೀ ಸುತ್ತೂರು ಮಠ

## ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 296

**26 ಸೆಪ್ಟೆಂಬರ್ 2026 * ಶನಿವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗಾಯನ



**ಪಂ. ಅನಿರುದ್ಧ್ ಐತಾಳ್**



**ಪಂ. ವೀರಭದ್ರಯ್ಯ ಹಿರೇಮಠ**

ಹಾರ್ಮೋನಿಯಂ



**ಪಂ. ರವೀಂದ್ರ ಯಾವಗಲ್**

ತಬಲ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ಪಂ. ಅನಿರುದ್ಧ ಐತಾಳ್**ರವರು ಹೊಸ ಪೀಳಿಗೆಯ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕರು. ಬಾಲ್ಯದಿಂದಲೇ ಶಾಸ್ತ್ರೀಯ ಸಂಗೀತದ ಪರಿಚಯ ದೊರಕಿತು. ಮಧುರ ಶಾರೀರವುಳ್ಳವರು. ಮೊದಲಿಗೆ ಶ್ರೀಮತಿ ಗೀತಾ ಗರುಡ್ ಪೃಥ್ವೀರಾಜ್‌ರವರ ಬಳಿ ಸಂಗೀತ ಕಲಿಯಲು ಆರಂಭಿಸಿದರು. ಅನಂತರ ಪಂ. ಬಸವರಾಜ ರಾಜಗುರುರವರ ಶಿಷ್ಯರಾದ ಡಾ. ಅಶೋಕ ಹುಗ್ಗಣ್ಣವರ ಬಳಿ ಸುದೀರ್ಘ ಅವಧಿಗೆ ಶಿಷ್ಯವೃತ್ತಿ ಮಾಡಿದರು. ಆಕಾಶವಾಣಿಯ ಅಖಿಲ ಭಾರತ ರಾಷ್ಟ್ರೀಯ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು. ನವದೆಹಲಿಯ ಸಿಸಿಆರ್‌ಟಿ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ವಿದ್ಯಾರ್ಥಿವೇತನಗಳಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಆಕಾಶವಾಣಿ 'ಎ' ದರ್ಜೆಯ ಕಲಾವಿದರು. ಷಣ್ಮುಖಾನಂದ ಭಾರತರತ್ನ ಡಾ. ಎಂ.ಎಸ್. ಸುಬ್ಬುಲಕ್ಷ್ಮಿ ಫೆಲೋಶಿಪ್ ಲಭಿಸಿದೆ. ಲೋಕಮತ್ ಸಮೂಹವು ನೀಡುವ ಪ್ರತಿಷ್ಠಿತ 'ಸೂರ್ ಜ್ಯೋತ್ಸ್ನಾ' ಪ್ರಶಸ್ತಿಯೂ ದೊರೆತಿದೆ. ಪ್ರತಿಷ್ಠಿತ ಸಂಗೀತೋತ್ಸವಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶಾಸ್ತ್ರೀಯ ಸಂಗೀತದ ಜೊತೆಗೆ, ರಂಗಗೀತೆಗಳು, ದಾಸರ ಪದಗಳು, ವಚನಗಳು ಹಾಗೂ ತತ್ತ್ವಪದಗಳ ಸಂಗೀತದಲ್ಲಿಯೂ ತರಬೇತಿ ಪಡೆದಿರುವುದು ಇವರ ವೈಶಿಷ್ಟ್ಯ.

**ಪಂ. ವೀರಭದ್ರಯ್ಯ ಹಿರೇಮಠರವರು** ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಪಂ. ಪುಟ್ಟರಾಜ ಗವಾಯಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡ ಕಲಾವಿದರು. ವಿದ್ವತ್ ಪರೀಕ್ಷೆಯಲ್ಲಿ ಮೂರನೇ ರ್‍ಯಾಂಕ್, ಗಂಧರ್ವ ಮಹಾವಿದ್ಯಾಲಯದ ಸಂಗೀತ ವಿಶಾರದ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ. ಪುಣ್ಯಾಶ್ರಮದ ಗುರುಕುಲದಲ್ಲಿ, ಅನಂತರ ಮೈಸೂರಿನ ಸಪ್ತಸ್ವರ ಸಂಗೀತ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು.

ಸ್ವರಸಂಕುಲ ಹಿಂದೂಸ್ತಾನಿ ಸಂಗೀತ ಶಾಲೆಯ ಮೂಲಕ ನೂರಾರು ಜನ ಗಾಯಕ–ವಾದಕರನ್ನು ರೂಪಿಸಿದ್ದಾರೆ. ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿ, ಉತ್ತಮ ಸಂಘಟಕರೆನಿಸಿಕೊಂಡಿದ್ದಾರೆ. ಪಂ. ಇಂದೂಧರ ನಿರೋಡಿಯವರ ಶಿಷ್ಯರಾಗಿ ಅವರು ಕೈಗೆತ್ತಿಕೊಂಡ, ಪಂ. ಭಾತಖಂಡೆಯವರ ಸುಮಾರು 2,000 ರಚನೆಗಳ ಧ್ವನಿಮುದ್ರಣದಲ್ಲಿ ನೆರವು ನೀಡಿದ್ದಾರೆ. ಸುತ್ತೂರು ಮಠದ ಗುರುಕುಲದ ವಟುಗಳಿಗೆ, ಜೆಎಸ್‌ಎಸ್ ಪ್ರೌಢಶಾಲೆ ಮತ್ತು 'ಅರಿವು' ಶಾಲೆಯಲ್ಲಿ ಸಂಗೀತವನ್ನು ಕಲಿಸಿದ್ದಾರೆ. ಗಾನಗಂಧರ್ವ ಕಲಾ ಟ್ರಸ್ಟ್ 'ಗಾನಶ್ರೀ' ಪ್ರಶಸ್ತಿ, ಬೆಂಗಳೂರಿನ ಶ್ರೀ ಗುರು ಗಾನಲಹರಿ ಸಂಗೀತ ಅಕಾಡೆಮಿಯ 'ಪುಟ್ಟಶ್ರೀ' ಪುರಸ್ಕಾರ, ಮೈಸೂರು ಜಿಲ್ಲಾಡಳಿತದಿಂದ 'ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿ ಮೊದಲಾದ ಪುರಸ್ಕಾರಗಳು ಲಭಿಸಿವೆ.

**ಪಂ. ರವೀಂದ್ರ ಯಾವಗಲ್‌ರವರು** ತಬಲಾ ಮಾಂತ್ರಿಕ ಪಂ. ಶೇಷಗಿರಿರಾವ್ ಹಾನಗಲ್‌ರವರ ಶಿಷ್ಯರು. ಆರಂಭಿಕ ಶಿಕ್ಷಣವನ್ನು ತಂದೆ ಶ್ರೀ ರಾಮಚಂದ್ರ ಯಾವಗಲ್‌ರವರ ಬಳಿ ಪಡೆದರು. ಹತ್ತನೆಯ ವರ್ಷದಲ್ಲಿಯೇ ಸವಾಯಿ ಗಂಧರ್ವ ಸಂಗೀತೋತ್ಸವದಲ್ಲಿ ಭಾಗವಹಿಸಿದುದು ಒಂದು ಸಾಧನೆ. ಬೆಂಗಳೂರು ಆಕಾಶವಾಣಿಯಲ್ಲಿ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಏಕವ್ಯಕ್ತಿ ಪ್ರಸ್ತುತಿ ಅಥವಾ ಸಾಥೀದಾರರಾಗಿ ಸಂಗೀತ ಕ್ಷೇತ್ರದ ಎಲ್ಲ ದಿಗ್ಗಜರೊಂದಿಗೂ ವೇದಿಕೆ ಹಂಚಿಕೊಂಡಿರುವವರು. ಇವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಜೀವಮಾನ ಸಾಧನೆಗಾಗಿ ಕರ್ನಾಟಕ ಕಲಾಶ್ರೀ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಮೊದಲಾದ ಹಲವಾರು ಪ್ರಶಸ್ತಿಗಳು ಸಂದಿವೆ.

# ಬೆಳದಿಂಗಳ ಸಂಗೀತ 297

## 26 ಅಕ್ಟೋಬರ್ 2026

**ವಯೊಲಿನ್ ವಾದನ**

**ವಿದ್ವಾನ್ ಅಂಬಿ ಸುಬ್ರಮಣ್ಯಂ**

**ಮೃದಂಗ**

**ವಿದ್ವಾನ್ ಕೆ.ಯು. ಜಯಚಂದ್ರರಾವ್**

**ಮೋರ್ಸಿಂಗ್**

**ವಿದ್ವಾನ್ ರಾಜಶೇಖರ್ ಭೀಮಾಚಾರ್**

ಫೋನ್: 0821–2548221, 2548223 * ಇಮೇಲ್: sutturmath@jssonline.org